**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

ದಿನಾಂಕಃ 11ನೇ ಏಪ್ರಿಲ್ ತಿಂಗಳು 2025ರಂದು

**ಸಿಸಿ ನಂ.75/2026**

**ಫಿರ್ಯಾದುದಾರರುಃ** ಶ್ರೀ.ಜಯಕುಮಾರ್.ಆರ್., ಕೃಷಿ ಅಧಿಕಾರಿ/ ತಾಂತ್ರಿಕ ಅಧಿಕಾರಿ – 2 ಹಾಗೂ ಬೀಜ ಪರಿವೀಕ್ಷಕರು, ಉಪ ಕೃಷಿ ನಿರ್ದೇಶಕರ ಕಛೇರಿ – 2, ಹುಣಸೂರು ಉಪವಿಭಾಗ, ಹುಣಸೂರು, (ಕೃಷಿ ಇಲಾಖೆ ಸರ್ಕಾರವನ್ನು ಪ್ರತಿನಿಧಿಸುವ ಅಧಿಕಾರಿ).

– ವಿರುದ್ಧ –

**ಆರೋಪಿಃ** ಶ್ರೀ ದಿವಾಕರ್.ಕೆ.ಪಿ., ಸಹಾಯಕ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಉತ್ತನಹಳ್ಳಿರಸ್ತೆ, ಬಂಡಿಪಾಳ್ಯ, ಮೈಸೂರು.

**ಬೀಜ ನಿಯಂತ್ರಣ ಅಧಿನಿಯಮ ಕಲಂ 274 ರ ಅಡಿಯಲ್ಲಿ ಆರೋಪಣಾ ಸಾರಾಂಶ**

ಫಿರ್ಯಾದುದಾರರಾದ ಜಯಕುಮಾರ್.ಆರ್., ಕೃಷಿ ಅಧಿಕಾರಿ ಇವರು ಬಿತ್ತನೇ ಬೀಜಗಳ ಮಾದರಿಯನ್ನು ತೆಗೆಯಲು ಇಲಾಖೆಯ ನಿಯಮದಂತೆ ದಿನಾಂಕಃ 17.07.2025ರಂದು ಬೆಳಿಗ್ಗೆ 11.00 ಗಂಟೆಯಿಂದ 1.00 ಗಂಟೆಯ ಸಮಯದಲ್ಲಿ ರೈತ ಸಂಪರ್ಕ ಕೇಂದ್ರ, ಹನಗೋಡು, ಹುಣಸೂರು ತಾಲ್ಲೂಕು ಇವರಿಗೆ ಸರಬರಾಜಾಗಿದ್ದ ಬೀಜಗಳ ಮಾದರಿಗಳನ್ನು ತೆಗೆದು ಒಂದು ವಿದಾಯಕ ರೀತಿಯಲ್ಲಿ ದಾಸ್ತಾನಿನಿಂದ ಪ್ರತಿನಿಧಿ ಸ್ವರೂಪದ ಮೂರು ಮಾದರಿಗಳನ್ನು ಪ್ರತಿಯೊಂದು ಅಂದಾಜು ಸುಮಾರು 400 ಗ್ರಾಂ.ಗಳಂತೆ ತೆಗೆದು ಒಂದು ಮಾದರಿಯನ್ನು ಬಿತ್ತನೆ ಬೀಜಗಳ ಮಾರಾಟ, ದಾಸ್ತಾನು ಮತ್ತು ಸಬರಬರಾಜುದಾರರಾದ ಆರೋಪಿಯಾದ ನಿಮ್ಮ ಪ್ರತಿನಿಧಿಗೆ ಒಪ್ಪಿಸಿ, ಎರಡನೇ ಮಾದರಿಯನ್ನು ಸಹಾಯಕ ಕೃಷಿ ನಿರ್ದೇಶಕರು ಹಾಗೂ ಬೀಜ ವಿಶ್ಲೇಷಕರು, ಬೀಜ ಪರೀಕ್ಷಾ ಪ್ರಯೋಗಾಲಯ, ಹೆಬ್ಬಾಳ, ಬೆಂಗಳೂರು –

24ರವರಿಗೆ ಜ್ಞಾಪನ ಪತ್ರ - 5 ರಲ್ಲಿ ಭರ್ತಿ ಮಾಡಿ ಮುದ್ದಾಂ ದಿನಾಂಕಃ 19.07.2025ರಂದು ಕಳುಹಿಸಿಕೊಟ್ಟಿದ್ದು ಹಾಗೂ ಉಳಿದ ಮೂರನೇ ಮಾದರಿಯನ್ನು ವಿದಾಯಕ ರೀತಿಯಲ್ಲಿ ತನ್ನ ವಶದಲ್ಲಿ ಇಟ್ಟುಕೊಂಡಿದ್ದು, ನಂತರ ದಿನಾಂಕಃ 18.08.2025ರಂದು ಸಹಾಯಕ ಕೃಷಿ ನಿರ್ದೇಶಕರು, ಇವರು ಪ್ರಕಾರ ಸದರಿ ಬೀಜಗಳು ನಿಗದಿತ ಕನಿಷ್ಟ ಶೇಕಡ ಮೊಳಕೆ ಪ್ರಮಾಣ ಹೊಂದಿರುವುದಿಲ್ಲ ಎಂದು ವರದಿ ಬಂದಿದ್ದು, ಇದರ ಪ್ರಕಾರ ಸದರಿ ಬೀಜಗಳು ಕನಿಷ್ಟ ಮಿತಿಯ ಅಂಕುರಣವನ್ನು ಮತ್ತು ಶುದ್ಧಿಯನ್ನು ಹೊಂದಿರುವುದಿಲ್ಲ, ಇದರಿಂದಾಗಿ ಬೀಜ ಅಧಿನಿಯಮ 1966ರ ಉಪಬಂಧದಂತೆ ಆರೋಪಿಯಾದ ನೀವು ಬೀಜ ಅಧಿನಿಯಮ ಕಲಂ.19(ಎ)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

| | |
|---|---|
| ಪ್ರಶ್ನೆಃ1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆಃ 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | ಒಪ್ಪಿಕೊಳ್ಳುತ್ತೇನೆ |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ANITHA Digitally signed by ANITHA Date: 2026.05.11 18:02:25 +0530

Sd/-

**(ಅನಿತ)**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾದಂ., ಹುಣಸೂರು .

ಆರೋಪಿಯ ಸಹಿಃ